# ಕರ್ನಾಟಕ ಲೋಕಾಯುಕ್ತ

ನಂ. ಉಪಲೋಕ್-2/ಡಿಇ-68/2017/ಎ.ಆರ್.ಇ-16

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 06.03.2021.

## ವಿಚಾರಣಾ ವರದಿ

**ಉಪಸ್ಥಿತರು:** **ಸೆಲ್ವಕುಮಾರ್**.ಸಿ, ಅಪರ ನಿಬಂಧಕರು ವಿಚಾರಣೆಗಳು-16, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌ ಶ್ರೀ. **ಕೃಷ್ಣಮೂರ್ತಿ,** ಅಂದಿನ ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ರವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಬಿಡಿ/5253/2012/ಎಆರ್ಇ-6 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 25/11/2016.
2. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 165 ಇಎನ್‌ಕ್ಯೂ 2016, ಬೆಂಗಳೂರು ದಿನಾಂಕ: 05.01.2017.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/68/2017, ಬೆಂಗಳೂರು ದಿನಾಂಕ: 17.01.2017.
4. O.M. No.Uplok-1 & 2/DE/Transfers/ 2019, dated 07/02/2019.

* * * *

ದೂರುದಾರರಾದ ಶ್ರೀ ಜಿ.ಎಂ ರುದ್ರೇಶಪ್ಪ, ತುಪ್ಪದಹಳ್ಳಿ ಗ್ರಾಮ ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ (ಇನ್ನು ಮುಂದೆ ದೂರುದಾರರೆಂದು ಕರೆಯಲ್ಪಡುತ್ತಾರೆ) ರವರು ಆ.ಸ.ನೌ **ಶ್ರೀ. ಕೃಷ್ಣಮೂರ್ತಿ, ಅಂದಿನ ಸಹಾಯಕ ಇಂಜಿನಿಯರ್, ಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ** (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರ ಎಂದು ಕರೆಯಲ್ಪಡುತ್ತಾರೆ) ರವರು ಸರ್ಕಾರಿ ನೌಕರರಾಗಿದ್ದು, ದೂರುದಾರರು ದೂರು ಅರ್ಜಿಯನ್ನು ಸಲ್ಲಿಸಿ

ತುಪ್ಪದಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ತುಪ್ಪದಹಳ್ಳಿ ಗ್ರಾಮದಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳನ್ನು ಕಳಪೆಯಾಗಿ ನಿರ್ವಹಿಸಿ ಹಣ ದುರುಪಯೋಗ ಅವ್ಯವಹಾರ ಎಸಗಿರುತ್ತಾರೆಂದು ಹಾಗೂ ರಾಜೀವ ಗಾಂಧಿ ಯೋಜನೆಯಡಿಯಲ್ಲಿ ಎಸ್.ಸಿ ಎಸ್.ಟಿ ವರ್ಗದವರಿಗೆ ಮಂಜೂರಾದ ಮನೆಗಳನ್ನು ಸಾಮ್ಯಾನ ವರ್ಗದವರಿಗೆ ಹಂಚಿಕೆ ಮಾಡಿರುತ್ತಾರೆಂದು ಆಪಾದಿಸಿ ಸಲ್ಲಿಸಿದ ದೂರು ಅರ್ಜಿಯಾಗಿರುತ್ತದೆ. ಕಾರಣ ಸದರಿಯವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿಕೊಂಡಿದ್ದು, ಸದರಿ ದೂರಿನ ಮೇಲೆ ಕ್ರಮವಹಿಸಿದ್ದು, ಪರಿಶೀಲಿಸಲಾಗಿ ಮೇಲ್ನೋಟಕ್ಕೆ ಆರೋಪಿತ ನೌಕರರಾದ ಆ.ಸ.ನೌ **ಶ್ರೀ. ಕೃಷ್ಣಮೂರ್ತಿ,** ಅಂದಿನ ಸಹಾಯಕ ಇಂಜಿನಿಯರ್, ಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ರವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಆರೋಪಿತ ನೌಕರ ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3(1) (ii) ರಿಂದ (iii ) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯಸ್ಥರಾಗಿದ್ದಾರೆಂದು ಕಂಡು ಬಂದಿದ್ದರಿಂದ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಗೌರವಾನ್ವಿತ ಉಪಲೋಕಾಯುಕ್ತ, ಕರ್ನಾಟಕ ಇವರಿಗೆ ಒಪ್ಪಿಸುವಂತೆ ಶಿಫಾರಸ್ಸು ಮಾಡಿದ್ದು, ಉಲ್ಲೇಖ-2 ರಂತೆ ಸರ್ಕಾರವು ಇಲಾಖಾ ವಿಚಾರಣೆಯನ್ನು ನಡೆಸುವಂತೆ ಲೋಕಾಯುಕ್ತ ಸಂಸ್ಥೆಗೆ ವಹಿಸಿದ್ದು, ಅದರನುಸಾರ ಗೌರವಾನ್ವಿತ ಉಪಲೋಕಾಯುಕ್ತರು-2 ರವರ ನಾಮನಿರ್ದೇಶನ ಆದೇಶ ಸಂಖ್ಯೆ ಉಪಲೋಕ್-2/ಡಿಇ/68/2017 ಬೆಂಗಳೂರು ದಿನಾಂಕ 17/01/2017 ರಂತೆ **ಶ್ರೀ. ಕೃಷ್ಣಮೂರ್ತಿ, ಅಂದಿನ ಸಹಾಯಕ ಇಂಜಿನಿಯರ್, ಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ** ರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು ದೋಷಾರೋಪಣೆ ತಯಾರು ಮಾಡಿ ಇಲಾಖಾ ವಿಚಾರಣೆ ಮಾಡಿ ವರಧ್ಧಿ ಸಲ್ಲಿಸಲು ಅಪರ ನಿಬಂಧಕರು, ವಿಚಾರಣೆಗಳು-11, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತಾರೆ. ಉಲ್ಲೇಖ-4 ರಂತೆ ಅಪರ ನಿಬಂಧಕರು, ವಿಚಾರಣೆಗಳು-11 ರವರಿಂದ ಈ ವಿಚಾರಣಾ ಪ್ರಾಧಿಕಾರವಾದ ಅಪರ ನಿಬಂಧಕರು, ವಿಚಾರಣೆಗಳು-16 ರವರಿಗೆ ವರ್ಗಾವಣೆಗೊಂಡಿರುತ್ತದೆ.

2) ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ. ರವರ ವಿರುದ್ಧ ದೋಷಾರೋಪಣೆ (Articles of Charge) ಅನ್ನು ಅಪರ ನಿಬಂಧಕರು, ವಿಚಾರಣೆಗಳು-11 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 25/02/2017 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

**ಅನುಬಂಧ-1**
**ದೋಷಾರೋಪಣೆ**

ಮೊದಲನೆಯದಾಗಿ:- ಆಪಾದಿತ ಸರ್ಕಾರಿ ನೌಕರರಾದ ಕೃಷ್ಣಮೂರ್ತಿ ಆದ ನೀವು ಚಿತ್ರದುರ್ಗ ಜಿಲ್ಲೆಯ, ಹೊಳಲ್ಕೆರೆ ತಾಲ್ಲೂಕಿನ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದಲ್ಲಿ 2010-11ನೆಯ ಇಸವಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಚಿತ್ರದುರ್ಗ ಜಿಲ್ಲೆಯ ಹೊಳಲ್ಕರೆ ತಾಲ್ಲೂಕಿನ ತುಪ್ಪದಹಳ್ಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ರಾಜೀವ್ ಗಾಂಧಿ ಯೋಜನೆಯಡಿಯಲ್ಲಿನ ಕಾಮಗಾರಿಗಳಿಗೆ ಸಂಬಂದಪಟ್ಟಂತೆ ರೂ.1.50 ಲಕ್ಷ ಗಳಿಗೆ ಅಂದಾಜು ಪಟ್ಟಿಯನ್ನು 2010-11ನೆಯ ಸಾಲಿಗೆ ತುಪ್ಪದಹಳ್ಳಿ ಗ್ರಾಮ ಪಂಚಾಯಿತಿಯ ಪರವಾಗಿ ತುಪ್ಪದಹಳ್ಳಿ ಗ್ರಾಮದಲ್ಲಿ ಶಾಲೆಯ ಆಟದ ಮೈದಾನವನ್ನು ಸಮತಟ್ಟು ಮಾಡುವ ಬಗ್ಗೆ ತಯಾರಿಸಲಾಗಿದ್ದು ಆ ಕಾಮಗಾರಿಯನ್ನು ಮಾಡಿದಿದ್ದರೂ ಸಹ ಆ ಗ್ರಾಮ ಪಂಚಾಯಿತಿಯ ಅಂದಿನ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯಾದ ಕುಬೇರಪ್ಪ ಮತ್ತು ಅಂದಿನ ಅಧ್ಯಕ್ಷರಾಗಿದ್ದ ಟಿ.ಆರ್. ಶಂಕರಮೂರ್ತಿರವರೊಡನೆ ನೀವು ಶಾಮೀಲಾಗಿ ಮೇಲ್ಕಂಡ ಮೊತ್ತವು ವೆಚ್ಚವಾಗಿದೆ ಎಂಬುದಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ, ಆ ಮೂಲಕ ನೀವು ಕರ್ತವ್ಯಲೋಪನ್ನೆಸಗಿ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ

ನಿಯಮಗಳು (ನಡತೆ) 1966 ನಿಯಮ 3(1) (ii) ರಿಂದ (iii)ರಡಿಯಲ್ಲಿ ದುರ್ನಡತೆಯನ್ನೆಸಗಿದ್ದೀರಿ.

ಎರಡನೆಯದಾಗಿ:- ಆಪಾದಿತ ಸರ್ಕಾರಿ ನೌಕರರಾದ ಕೃಷ್ಣಮೂರ್ತಿ ಆದ ನೀವು ಚಿತ್ರದುರ್ಗ ಜಿಲ್ಲೆಯ, ಹೊಳಲ್ಕೆರೆ ತಾಲ್ಲೂಕಿನ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದಲ್ಲಿ 2010-11ನೆಯ ಇಸವಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಚಿತ್ರದುರ್ಗ ಜಿಲ್ಲೆಯ ಹೊಳಲ್ಕರೆ ತಾಲ್ಲೂಕಿನ ತುಪ್ಪದಹಳ್ಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ರಾಜೀವ್ ಗಾಂಧಿ ಯೋಜನೆಯಡಿಯಲ್ಲಿನ ಕಾಮಗಾರಿಗಳಿಗೆ ಸಂಬಂದಪಟ್ಟಂತೆ ತುಪ್ಪದಹಳ್ಳಿ ಗ್ರಾಮದ ತಿಪ್ಪೇಶಪ್ಪ ಎಂಬವರ ಮನೆಯಿಂದ ಚೌಡಮ್ಮ ದೇವಸ್ಥಾನದ ತನಕ ಚರಂಡಿ ಕಾಮಗಾರಿಗೆಂದು ರೂ.1.90 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು ಸದರಿ ಕಾಮಗಾರಿಯನ್ನು ನಡೆಸದೆ ಕಾಮಗಾರಿಯನ್ನು ನಡೆಸಲಾಗಿದೆ ಎಂಬುದಾಗಿ ಸುಳ್ಳು ದಾಖಲೆಗಳನ್ನು ಅಂದಿನ ಪಂಚಾಯಿತಿ ಅಭಿವೃದ್ದಿ ಅಧಿಕಾರಿಯಾಗಿದ್ದ ಕುಬೇರಪ್ಪ ಮತ್ತು ಅಂದಿನ ಪಂಚಾಯಿತಿ ಅಧ್ಯಕ್ಷರಾಗಿದ್ದ ಕೆ.ಆರ್.ಶಂಕರಮೂರ್ತಿ ರವರೊಡನೆ ಶಾಮೀಲಾಗಿ ಸೃಷ್ಟಿ ಮಾಡಿ ಆ ಮೂಲಕ ನೀವು ಕರ್ತವ್ಯಲೋಪನ್ನೆಸಗಿ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ii) ರಿಂದ (iii)ರಡಿಯಲ್ಲಿ ದುರ್ನಡತೆಯನ್ನೆಸಗಿದ್ದೀರಿ.

ಮೂರನೆಯದಾಗಿ:- ಆಪಾದಿತ ಸರ್ಕಾರಿ ನೌಕರರಾದ ಕೃಷ್ಣಮೂರ್ತಿ ಆದ ನೀವು ಚಿತ್ರದುರ್ಗ ಜಿಲ್ಲೆಯ, ಹೊಳಲ್ಕೆರೆ ತಾಲ್ಲೂಕಿನ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದಲ್ಲಿ 2010-11ನೆಯ ಇಸವಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಚಿತ್ರದುರ್ಗ ಜಿಲ್ಲೆಯ ಹೊಳಲ್ಕರೆ ತಾಲ್ಲೂಕಿನ ತುಪ್ಪದಹಳ್ಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಆರ್.ಡಿ. ಕಾವಲು ಗ್ರಾಮದಲ್ಲಿ ಯಾವುದೇ ಅಧಿಕೃತವಾದ ಆದೇಶವಿಲ್ಲದೆ ಅನವಶ್ಯಕವಾದ ಕಾಮಗಾರಿಯನ್ನು ನಡೆಸಲಾಗಿದೆ ಎಂಬುದಾಗಿ ಅಂದಿನ

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿದ್ದ ಕುಬೇರಪ್ಪ ಮತ್ತು ಅಂದಿನ ಪಂಚಾಯಿತಿ ಅಧ್ಯಕ್ಷರಾಗಿದ್ದ ಕೆ.ಆರ್.ಶಂಕರಮೂರ್ತಿ ರವರೊಡನೆ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಆ ಮೂಲಕ ನೀವು ಕರ್ತವ್ಯಲೋಪನ್ನೆಸಗಿ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ii) ರಿಂದ (iii)ರಡಿಯಲ್ಲಿ ದುರ್ನಡತೆಯನ್ನೆಸಗಿದ್ದೀರಿ.

ನಾಲ್ಕನೆಯದಾಗಿ:- ಆಪಾದಿತ ಸರ್ಕಾರಿ ನೌಕರರಾದ ಕೃಷ್ಣಮೂರ್ತಿ ಆದ ನೀವು ಚಿತ್ರದುರ್ಗ ಜಿಲ್ಲೆಯ, ಹೊಳಲ್ಕೆರೆ ತಾಲ್ಲೂಕಿನ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದಲ್ಲಿ 2010-11ನೆಯ ಇಸವಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಚಿತ್ರದುರ್ಗ ಜಿಲ್ಲೆಯ ಹೊಳಲ್ಕರೆ ತಾಲ್ಲೂಕಿನ ತುಪ್ಪದಹಳ್ಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಯಾವುದೇ ಅಧಿಕೃತ ಆದೇಶವಿಲ್ಲದೆ ತುಪ್ಪದಹಳ್ಳಿ ಗ್ರಾಮದಲ್ಲಿ ನಡೆಸಬೇಕಾಗಿದ್ದ ಕಾಮಗಾರಿಗಳನ್ನು ಆರ್.ಡಿ. ಕಾವಲು ಗ್ರಾಮದಲ್ಲಿ ನಡೆಸಿ ಸರ್ಕಾರಕ್ಕೆ ನಿಷ್ಪಲವಾದ ತಲಾ ರೂ.1.50 ಲಕ್ಷ ಮತ್ತು ರೂ.1.90 ಲಕ್ಷಗಳ ಆರ್ಥಿಕ ನಷ್ಟವನ್ನುಂಟು ಮಾಡಿ ಆ ಮೂಲಕ ನೀವು ಕರ್ತವ್ಯಲೋಪನ್ನೆಸಗಿ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3 (1) (ii) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿದ್ದೀರಿ.

## ಅನುಬಂಧ-2
## ದೋಷರೋಪಣೆಯ ವಿವರ

ದೂರುದಾರರಾದ ಶ್ರೀ ಜಿ.ಎಂ. ರುದ್ರೇಶಪ್ಪ, ತುಪ್ಪದಹಳ್ಳಿ ಗ್ರಾಮ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ರವರು ಹೊಳಲ್ಕೆರೆ ತಾಲ್ಲೂಕಿನ ತುಪ್ಪದಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ವಿವಿಧ ಯೋಜನೆಗಳಲ್ಲಿ ಕೈಗೊಂಡ ಕಾಮಗಾರಿಯು ಕಳಪೆಯಿಂದ ಕೂಡಿರುವುದಾಗಿ ಹಾಗೂ ಸದರಿ ಕಾಮಗಾರಿಯ ಹಣವನ್ನು ದುರುಯೋಗ ಪಡಿಸಿಕೊಂಡಿರುತ್ತಾರೆ ಮತ್ತು ರಾಜೀವ್ ಗಾಂಧಿ

ಯೋಜನೆಯಡಿಯಲ್ಲಿ ಎಸ್.ಸಿ/ಎಸ್.ಟಿ. ವರ್ಗದವರಿಗೆ ಮಂಜೂರಾದ ಮನೆಗಳನ್ನು ಸಾಮಾನ್ಯ ವರ್ಗದವರಿಗೆ ಹಂಚಿಕೆ ಮಾಡಿರುತ್ತಾರೆಂದು ದೂರುದಾರರು ತಮ್ಮ ದೂರಿನಲ್ಲಿ ಆಪಾದಿಸಿರುತ್ತಾರೆ.

ದೂರುದಾರರು ಮಾಡಿರುವ ಆಪಾದನೆಗಳಿಗೆ ಸಂಬಂದಿಸಿದಂತೆ ಲೋಕಾಯುಕ್ತ ಸಂಸ್ಥೆಯ ತಾಂತ್ರಿಕ ವಿಭಾಗ ತನಿಖಾಧಿಕಾರಿಯಾದ ಶ್ರೀ ಕೆ.ಟಿ. ಪ್ರಕಾಶ್ ರವರು ತನಿಖೆಯನ್ನು ಕೈಗೊಂಡು ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ತನಿಖಾಧಿಕಾರಿಯವರು ತಮ್ಮ ತನಿಖಾ ವರದಿಯಲ್ಲಿ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

1) ತುಪ್ಪದಹಳ್ಳಿ ಗ್ರಾಮದ ಶಾಲೆಯ ಆವರಣದ ಸಮತಟ್ಟು ಕಾಮಗಾರಿಗೆ ರೂ.1,50,000/-ಗಳ ಅಂದಾಜು ಮೊತ್ತವು 2010-11ನೆಯ ಇಸವಿಯಲ್ಲಿ ಅನುಮೋದನೆಯಾಗಿದ್ದು ಕಾಮಗಾರಿಯನ್ನು ಅಂದಾಜು ಪಟ್ಟಿಯಲ್ಲಿನಂತೆ ನಿರ್ವಹಿಸಲಾಗಿದೆ ಎಂದು ದಾಖಲೆಗಳಲ್ಲಿ ನಮೂದಿಸಿದ್ದು, ಸ್ಥಳ ಪರಿವೀಕ್ಷಣೆ ಕಾಲದಲ್ಲಿ ಸದರಿ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ ಬದಲಿಗೆ ಆರ್.ಡಿ. ಕಾವಲ ಗ್ರಾಮದ ಶಾಲೆಯ ಆವರಣದ ಸಮತಟ್ಟು ಮಾಡಲಾಗಿರುತ್ತದೆ ಎಂದು ಪಂಚಾಯಿತಿಯ ಸಿಬ್ಬಂದಿಯವರು ತಿಳಿಸಿರುತ್ತಾರೆಂದು ನಮೂದಿಸಿರುತ್ತಾರೆ.

2) 2010-11ನೆಯ ಸಾಲಿನಲ್ಲಿ ತುಪ್ಪದಹಳ್ಳಿ ಗ್ರಾಮದ ತಿಪ್ಪೇಶಪ್ಪ ಮನೆಯಿಂದ ಚೌಡಮ್ಮ ದೇವಸ್ಥಾನದವರೆಗಿನ ಬಾಕ್ಸ್ ಚರಂಡಿ ಕಾಮಗಾರಿಗೆ ರೂ.1.90 ಲಕ್ಷಗಳಿಗೆ ಅನುಮೋದನೆ ದೊರೆತಿದ್ದು, ಅಂದಾಜು ಪಟ್ಟಿಯಂತೆ ಕಾಮಗಾರಿಯನ್ನು ನಿರ್ವಹಿಸಲಾಗಿದೆ ಎಂದು ದಾಖಲೆಗಳಲ್ಲಿ ನಮೂದಿಸಿದ್ದು, ಸದರಿ ಕಾಮಗಾರಿಯನ್ನು ಪರಿಶೀಲಿಸಿದಾಗ ಕಾಮಗಾರಿಯನ್ನು ಕೈಗೊಳ್ಳದೇ ಆರ್.ಡಿ. ಕಾವಲ ಗ್ರಾಮದ ಹಿರಜ್ಜ ರವರ ಮನೆಯಿಂದ ಚೌಡಮ್ಮ ದೇವಸ್ಥಾನದ ವರೆಗೆ ಕಾಮಗಾರಿಯನ್ನು ನಿರ್ವಹಿಸಿರುವುದಾಗಿ ಪಂಚಾಯಿತಿ ಸಿಬ್ಬಂದಿಯವರು ತಿಳಿಸಿರುತ್ತಾರೆಂದು ನಮೂದಿಸಿರುತ್ತಾರೆ.

3) ಆರ್.ಡಿ. ಕಾವಲ ಗ್ರಾಮದಲ್ಲಿ ನಿರ್ವಹಿಸಲಾದ ಬದಲಿ ಕಾಮಗಾರಿಗಳಿಗೆ ಸಕ್ಷಮ ಪ್ರಾಧಿಕಾರದಿಂದ ಯಾವುದೇ ಅನುಮೋದನೆಯ ಪಡೆದಿರುವುದಿಲ್ಲ ಹಾಗೂ ಸದರಿ ಕಾಮಗಾರಿಗಳಿಗೆ ಭರಿಸಿದ ವೆಚ್ಚ ರೂ.3.40 ಲಕ್ಷ ನಿಷ್ಫಲ ವೆಚ್ಚವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ದೂರಿಗೆ ಸಂಬಂಧಿಸಿದಂತೆ ನಿಮಗೆ ಪರಿಶೀಲನಾ ಟಿಪ್ಪಣಿಯನ್ನು ಕಳುಹಿಸಿ, ಉತ್ತರವನ್ನು ಸಲ್ಲಿಸುವಂತೆ ಸೂಚಿಸಿದ್ದು, ಅದರಂತೆ ನೀವು ಉತ್ತರವನ್ನು ಸಲ್ಲಿಸಿದ್ದು, ಸದರಿ ಉತ್ತರವನ್ನು ಒಪ್ಪಲು ಬಾರದ ಕಾರಣ, ನಿಮ್ಮ ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರಡಿಯಲ್ಲಿ ವರದಿಯನ್ನು ಸಲ್ಲಿಸಿ, ನಿಮ್ಮ ವಿರುದ್ಧ ಶಿಸ್ತು ಕ್ರಮವನ್ನು ಜರುಗಿಸಲು ತಿಳಿಸಲಾಗಿತ್ತು. ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಯಿಂದ ಮಾಡಿರುವ ಶಿಫಾರಸ್ಸನ್ನು ಒಪ್ಪಿ ನಿಮ್ಮ ವಿರುದ್ಧ ಶಿಸ್ತು ಕ್ರಮಕೈಗೊಂಡು ವರದಿಯನ್ನು ಸಲ್ಲಿಸುವಂತೆ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಲಾಗಿರುತ್ತದೆ. ಆದ್ದರಿಂದ, **ನಿಮ್ಮ ಮೇಲೆ ಈ ಮೇಲ್ಕಂಡಂತೆ ದೋಷಾರೋಪಣೆ.**

3) ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌ ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ. ರವರು ದಿನಾಂಕ 25/02/2017 ರಂದು ವಿಚಾರಣಾಧಿಕಾರಿಯವರ ಮುಂದೆ ಹಾಜರಾಗಿದ್ದು, ಸದರಿಯವರ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್. ಸಿಸಿಎ ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌ. ರವರು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

4) ಆ.ಸ.ನೌ ರವರ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

5) ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ. ರವರು ತಮ್ಮ ಪರವಾಗಿ ದಿನಾಂಕ 24/07/2017 ರಂದು ರಕ್ಷಣಾ ಹೇಳಿಕೆಯನ್ನು ಸಲ್ಲಿಸಿ, ಸದರಿ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು, ತಾವು ದುರ್ನಡತೆ ಹಾಗೂ ಕರ್ತವ್ಯ ಲೋಪ ಎಸಗಿರುವುದಿಲ್ಲವೆಂದು, ತಾನು ಸರ್ಕಾರಿ ಕೆಲಸವನ್ನು ಪ್ರಾಮಾಣಿಕವಾಗಿ ಕಾನೂನಿನ ಚೌಕಟ್ಟಿನಲ್ಲಿ ನಿರ್ವಹಿಸಿದ್ದಾಗಿ, ದುರ್ನಡತೆಯಿಂದ ನಡೆದುಕೊಂಡಿರುವುದಿಲ್ಲವೆಂದು, ಆದ್ದರಿಂದ, ತನ್ನನ್ನು ಈ ಆರೋಪದಿಂದ ಕೈಬಿಡುವಂತೆ ವಿನಂತಿಸಿರುತ್ತಾರೆ.

6) ಈ ವಿಚಾರಣೆಯಲ್ಲಿ, ಆ.ಸ.ನೌ. ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರ ಶ್ರೀ **ಜಿ.ಎಂ. ರುದ್ರೇಶಪ್ಪ** ರವರನ್ನು **ಪಿ.ಡಬ್ಲ್ಯೂ–1** ಎಂದು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.1 ರಿಂದ 5** ರವರೆಗಿನ ದಾಖಲೆಗಳನ್ನು, ಶ್ರೀ ಪ್ರಕಾಶ್ ಕೆ.ಟಿ., ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ಪಿ.ಡಬ್ಲ್ಯೂ–2 ಎಂದು ಸಾಕ್ಷ್ಯ ನುಡಿಸಿಕೊಂಡು ನಿ.ಪಿ–6 ರಿಂದ 14 ರವರೆಗಿನ ದಾಖಲಾತಿಗಳನ್ನು, ಶ್ರೀ ರುದ್ರಮೂರ್ತಿ, ನಿವೃತ್ತ ಉಪ ನಿಯಂತ್ರಕರು, ಕರ್ನಾಟಕಕ ಲೋಕಾಯುಕ್ತ, ಬೆಂಗಳೂರು ರವರನ್ನು ಪಿ.ಡಬ್ಲ್ಯೂ–3 ಎಂದು ಸಾಕ್ಷ್ಯ ನುಡಿಸಿಕೊಂಡು ನಿ.ಪಿ–15 ದಾಖಲಾತಿಯನ್ನು ಮತ್ತು ಶ್ರೀ ಬಿ.ಆರ್. ಅನಿಲ್ ಕುಮಾರ್, ಮುಖ್ಯ ಇಂಜಿನಿಯರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ಪಿ.ಡಬ್ಲ್ಯೂ–4 ಎಂದು ಸಾಕ್ಷ್ಯ ನುಡಿಸಿಕೊಂಡು ನಿ.ಪಿ–16 ರಿಂದ 22 ದಾಖಲಾತಿಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

ತದನಂತರ, ಆ.ಸ.ನೌ. ರವರ ದ್ವಿತೀಯ ಮೌಖಿಕ ಹೇಳಿಕೆಯನ್ನು ದಿನಾಂಕ 20/12/2019 ರಂದು ಪಡೆದುಕೊಳ್ಳಲಾಗಿರುತ್ತದೆ.

7) ಆಪಾದಿತ ಸರ್ಕಾರಿ ನೌಕರರು ತಮ್ಮ ಪರವಾಗಿ **ಸಾಕ್ಷ್ಯ ಇರುವುದಿಲ್ಲವೆಂದು ತಿಳಿಸಿದ್ದಲ್ಲದೆ ಯಾವುದೇ ದಾಖಲಾತಿಗಳನ್ನು** ಗುರುತಿಸಿಕೊಂಡಿರುವುದಿಲ್ಲ. ಆದ್ದರಿಂದ, ಆಪಾದಿತ ಸರ್ಕಾರಿ ನೌಕರರಿಗೆ ಕರ್ನಾಟಕ ನಾಗರೀಕ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 11(18) ರನ್ವಯ ಪ್ರಶ್ನಾವಳಿಯನ್ನು (Questionnaire) ಸಿದ್ದಪಡಿಸಿ ದಿನಾಂಕ 02.02.2021 ರಂದು ಹೇಳಿಕೆಯನ್ನು ಪಡೆಯಲಾಗಿರುತ್ತದೆ.

8) ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಎಲ್ಲಾ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2**: ಆದೇಶವೇನು?

9) ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

10) ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

ಅಂಶ 1: ಸಕಾರಾತ್ಮಕವಾಗಿದೆ.

ಅಂಶ 2: ಅಂತಿಮ ಆದೇಶದಂತೆ

**ಕಾರಣಗಳು:**

11) ಈ ಪ್ರಕರಣದಲ್ಲಿ ಆ.ಸ.ನೌ. ರವರ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರ ಶ್ರೀ **ಜಿ.ಎಂ. ರುದ್ರೇಶಪ್ಪ** ರವರನ್ನು **ಪಿ.ಡಬ್ಲ್ಯೂ–1** ಎಂದು ಸಾಕ್ಷ್ಯ ನುಡಿಸಿಕೊಂಡು, **ನಿ.ಪಿ.1 ರಿಂದ 5** ರವರೆಗಿನ ದಾಖಲೆಗಳನ್ನು ಗುರ್ತಿಸಿಕೊಂಡಿದ್ದು, ಶ್ರೀ ಪ್ರಕಾಶ್ ಕೆ.ಟಿ., ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ಪಿ.ಡಬ್ಲ್ಯೂ–2 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ–6 ರಿಂದ 14 ರವರೆಗಿನ ದಾಖಲಾತಿಗಳನ್ನು, ಶ್ರೀ ರುದ್ರಮೂರ್ತಿ, ನಿವೃತ್ತ ಉಪ ನಿಯಂತ್ರಕರು, ಕರ್ನಾಟಕಕ ಲೋಕಾಯುಕ್ತ, ಬೆಂಗಳೂರು ರವರನ್ನು ಪಿ.ಡಬ್ಲ್ಯೂ–3 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ–15 ದಾಖಲಾತಿಯನ್ನು ಮತ್ತು ಶ್ರೀ ಬಿ.ಆರ್. ಅನಿಲ್ ಕುಮಾರ್, ಮುಖ್ಯ ಇಂಜಿನಿಯರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ಪಿ.ಡಬ್ಲ್ಯೂ–4 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ–16 ರಿಂದ 22 ದಾಖಲಾತಿಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

12) ದೂರುದಾರರು ದಿನಾಂಕ 09/07/2012 ರಂದು ಈ ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿದ ಪ್ರಪತ್ರ–1 ಮತ್ತು 2 ರಡಿಯಲ್ಲಿ ಸಲ್ಲಿಸಿದ ದೂರು **ನಿಪಿ–1** ಮತ್ತು **ನಿಪಿ–2** ಎಂದು, ತುಪ್ಪದಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯ ಆಟದ ಮೈದಾನಕ್ಕೆ ಸಂಬಂಧಪಟ್ಟಂತೆ, ಮುಖ್ಯೋಪಾಧ್ಯಾಯರು ಕೊಟ್ಟಿರುವ ಒಂದು ಮೂಲ ಪತ್ರ **ನಿಪಿ–3** ಎಂದು, ನಗದು ಪುಸ್ತಕದ 2 ಜೆರಾಕ್ಸ್ ಹಾಳೆಗಳು **ನಿಪಿ–4 ಮತ್ತು ನಿಪಿ–5** ಎಂದು, ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಆಪಾದಿತ ಸರ್ಕಾರಿ

ನೌಕರ ಹಾಗೂ ಇತರೆ ಎದುರುದಾರರಿಗೆ ಸಮಜಾಯಿಷಿ ನೀಡಲು ಬರೆದಿರುವ ಪತ್ರ **ನಿಪಿ–6** (5 ಪತ್ರಗಳು) ಎಂದು, ದಿನಾಂಕ 27/02/2013ರ ಎಇಇ., ಪಂಚಾಯತ್ ರಾಜ್ ಇಂಜಿನಿಯರಿಂಗ ಉಪವಿಭಾಗ, ಹೊಳಲ್ಕೆರೆ ರವರು ಲೋಕಾಯುಕ್ತ ಕಾರ್ಯಪಾಲಕ ಅಭಿಯಂತರರಿಗೆ ಬರೆದ ಪತ್ರವನ್ನು **ನಿಪಿ–7** ಎಂದು, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ತುಪ್ಪದಹಳ್ಳಿ ಗ್ರಾಮ ಪಂಚಾಯತಿ, ಹೊಳಲ್ಕೆರೆ ಗ್ರಾಮ ಪಂಚಾಯತಿ ರವರು ದಿ: 07/05/2013 ರಂದು ಬರೆದ ಪತ್ರ **ನಿಪಿ–8** ಎಂದು, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಹೊಳಲ್ಕೆರೆ ರವರು ದಿ: 20/05/2013ರಂದು ನೀಡಿದ ಪತ್ರ **ನಿಪಿ–9** ಎಂದು, ಅಧ್ಯಕ್ಷರು ತುಪ್ಪದಹಳ್ಳಿ ಗ್ರಾಮ ಪಂಚಾಯತಿ, ರವರು ಲೋಕಾಯುಕ್ತಕ್ಕೆ ಬರೆದ ಪತ್ರ **ನಿಪಿ–10** ಎಂದು, ತನಿಖಾಧಿಕಾರಿಗಳು, ಲೋಕಾಯುಕ್ತ ತಾಂತ್ರಿಕ ವಿಭಾಗ, ಬೆಂಗಳೂರು ರವರು ಫಿರ್ಯಾದುದಾರರಿಗೆ ದಿ: 18/11/2013 ರಂದು ಬರೆದ ಪತ್ರ **ನಿಪಿ–11** ಎಂದು, ದಿ: 26/11/2013ರಂದು ದೂರುದಾರರು ಮತ್ತು ಎದುರುದಾರರಿಗೆ ತನಿಖಾಧಿಕಾರಿಗಳಿಗೆ ಬರೆದ ಪತ್ರ **ನಿಪಿ–12** (6 ಪುಟ) ಎಂದು, ದಿ: 03/12/2013 ರಂದು ತನಿಖಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಬರೆದ ಮಹಜರ್ **ನಿಪಿ–13** ಎಂದು, ಸದರಿ ಸಮಯದಲ್ಲಿ ಚಿತ್ರೀಕರಿಸಿದ ಚಿತ್ರಣದ ಸಿಡಿ **ನಿಪಿ–14** ಎಂದು ಗುರುತಿಸಿಕೊಂಡಿರುತ್ತಾರೆ.

13) ಶ್ರೀ. **ರುದ್ರಮೂರ್ತಿ/ಪಿಡಬ್ಲ್ಯೂ–3**, ಸಹಾಯಕ ನಿಯಂತ್ರಕರು, (ಲೆಕ್ಕ ಪತ್ರ) ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ ರವರು ಎದುರುದಾರರಾದ ಶ್ರೀ. ಜಿ.ಎ ಕುಬೇಂದ್ರಪ್ಪ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ತುಪ್ಪದಹಳ್ಳಿ ಗ್ರಾಮ ಪಂಚಾಯತಿ ರವರು ಸಲ್ಲಿಸಿದ ಆಕ್ಷೇಪಣೆಯನ್ನು ನಿಪಿ–**15** (**11 ಹಾಳೆಗಳು**) ಎಂದು ಗುರುತಿಸಿಕೊಂಡಿರುತ್ತಾರೆ ಹಾಗೂ ಶ್ರೀ. ಅನಿಲ್ ಕುಮಾರ್/ಪಿಡಬ್ಲ್ಯೂ–4, ಮುಖ್ಯ ಇಂಜಿನಿಯರ್, ಕರ್ನಾಟಕ ಲೋಕಾಯುಕ್ತ ರವರಿಗೆ ತನಿಖಾಧಿಕಾರಿ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಸಲ್ಲಿಸಿದ ವರದಿ **ನಿಪಿ–16** ಎಂದು, ಸದರಿ ವರದಿಯನ್ನಾಧರಿಸಿ ಕಂಡಿಕೆ 61 ರಿಂದ 63ರ ವರೆಗಿನ ತನಿಖೆಯ

ಸಂಕ್ಷಿಪ್ತ ವಿವರಣೆ **ನಿಪಿ–17** ಎಂದು, ಶ್ರೀ. ರುದ್ರಮೂರ್ತಿ, ಸಹಾಯಕ ನಿಯಂತ್ರಕರು, ಕರ್ನಾಟಕ ಲೋಕಾಯುಕ್ತ ರವರು ಮುಖ್ಯ ಅಭಿಯಂತರರಿಗೆ ಸಲ್ಲಿಸಿದ ವರದಿಯ ಕಂಡಿಕೆ 93 ರಿಂದ 109 ರ ವರೆಗಿನದ್ದನ್ನು **ನಿಪಿ–18** ಎಂದು, ಸದರಿ ವರದಿಯನ್ನಾಧರಿಸಿ ಸಲ್ಲಿಸಿದ ವರದಿಯನ್ನು **ನಿಪಿ–19** ಎಂದು, ಸಹಾಯಕ ನಿಯಂತ್ರಕರು ಪುನಹಃ ಕೇಳಿದ ಸ್ಪಷ್ಟಿಕರಣಕ್ಕೆ ಸಂಬಂಧಿಸಿದಂತೆ, ನೀಡಿದ ವರದಿ ಕಂಡಿಕೆ 124 ರಿಂದ 132ರ ವರೆಗಿನದ್ದನ್ನು **ನಿಪಿ–20** ಎಂದು, ಸದರಿ ವರದಿನ್ನಾಧರಿಸಿ ತಾನು ಸಲ್ಲಿಸಿದ ವರದಿಯ ಕಂಡಿಕೆ 133 ಮತ್ತು 134 ನ್ನು **ನಿಪಿ–21** ಎಂದು, ದೂರುದಾರರು ಆರೋಪಿಸಿದ ಕಾಮಗಾರಿಯಲ್ಲಿ ಅವ್ಯವಹಾರ ನಡೆದಿರುವುದಿಲ್ಲವೆಂದು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ಹೊಳಲ್ಕೆರೆ ರವರು ದಿ: 17/07/2015 ರಂದು ಲೋಕಾಯುಕ್ತ ಸಂಸ್ಥೆಗೆ ಬರೆದ ಪತ್ರ **ನಿಪಿ–22** ಎಂದು ಗುರುತಿಸಿಕೊಂಡಿರುತ್ತಾರೆ.

14) ಆಪಾದಿತ ಸರ್ಕಾರಿ ನೌಕರರು ತಮ್ಮ ಪರವಾಗಿ ಯಾವುದೇ ಮೌಖಿಕ ಸಾಕ್ಷ್ಯ ಅಥವಾ **ದಾಖಲಾತಿಗಳನ್ನು** ಗುರುತಿಸಿಕೊಂಡಿರುವುದಿಲ್ಲ. ಆದ್ದರಿಂದ, ಆಪಾದಿತ ಸರ್ಕಾರಿ ನೌಕರರಿಗೆ ಕರ್ನಾಟಕ ನಾಗರೀಕ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 11(18) ರನ್ವಯ ಪ್ರಶ್ನಾವಳಿಯನ್ನು ( Questionnaire ) ಸಿದ್ದಪಡಿಸಿ ದಿನಾಂಕ 02.02.2021 ರಂದು ಹೇಳಿಕೆಯನ್ನು ಪಡೆಯಲಾಗಿರುತ್ತದೆ.

**15)** ಈ ಪ್ರಕರಣದಲ್ಲಿ ಆ.ಸ.ನೌ. ರವರ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರ ಶ್ರೀ **ಜಿ.ಎಂ ರುದ್ರೇಶಪ್ಪ** ರವರನ್ನು **ಪಿ.ಡಬ್ಲ್ಯೂ–1** ಎಂದು ಸಾಕ್ಷ್ಯ ನುಡಿಸಿಕೊಂಡಿದ್ದು, ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈ ಆ.ಸ.ನೌ ರವರು ಹೊಳಲ್ಕೆರೆಯ ಜಿಲ್ಲಾ ಪಂಚಾಯತಿಯ ಇಂಜಿನಿಯರ್

ಇದ್ದಿರುವುದಾಗಿ, ಸದರಿಯವರು 2011-12ನೇ ಸಾಲಿನಲ್ಲಿ ಹೊಳಲ್ಕೆರೆಯ ತುಪ್ಪದಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯ ಮೈದಾನವನ್ನು, 2012-13ನೇ ಸಾಲಿನಲ್ಲಿ ಸಮತಟ್ಟು ಮಾಡಲಾಗಿದ್ದು, ಆ ಸಮಯದಲ್ಲಿ ಆಪಾದಿತ ಸರ್ಕಾರಿ ನೌಕರರು ಅಭಿಯಂತರರಾಗಿದ್ದು, ರೂ. 1,50,000/-ಗಳಿಗೆ ಬಿಲ್ ತಯಾರಿಸಿರುವುದಾಗಿ ನುಡಿದಿರುತ್ತಾರೆ. ಮುಂದುವರೆದು, ತುಪ್ಪದಹಳ್ಳಿ ಎಂಬಲ್ಲಿ ಚೌಡಮ್ಮನ ದೇವಸ್ಥಾನದಿಂದ ತಿಪ್ಪೇಶಪ್ಪ ಎಂಬುವರ ಮನೆಯ ತನಕ ಚರಂಡಿ ಕಾಮಗಾರಿಯನ್ನು ಆಪಾದಿತ ಸರ್ಕಾರಿ ನೌಕರರ ಅವಧಿಯಲ್ಲಿ ಮಾಡಲಾಗಿದ್ದು, ಸದರಿ ಕಾಮಗಾರಿಗೆ 1,90,000/- ರೂ ಗಳನ್ನು ಬಿಲ್ ಮಾಡಿಕೊಂಡಿರುವುದಾಗಿ ಹಾಗೂ ತುಪ್ಪದಹಳ್ಳಿ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಇಂದಿರಾ ಅವಾಸ ಯೋಜನೆಯಡಿಯಲ್ಲಿ ಆಪಾದಿತ ಸರ್ಕಾರಿ ನೌಕರರು ಮನೆಯನ್ನು ಕಟ್ಟಿಸಿಕೊಡುವ ಬದಲು ಸಾಮಾನ್ಯ ವರ್ಗದವರಿಗೆ ಮನೆಯನ್ನು ಕಟ್ಟಿಸಿಕೊಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

**16) ಪಿಡಬ್ಲ್ಯೂ-1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ** ತುಪ್ಪದಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯ ಮೈದಾನವನ್ನು ಸಮತಟ್ಟನ್ನು ಮಾಡಿರುವುದಿಲ್ಲ ಮತ್ತು ಆ ಮೈದಾನಕ್ಕೆ ಆವರಣದ ಗೋಡೆಯನ್ನು ಮಾತ್ರ ಕಟ್ಟಿಸಲಾಗಿದೆ. ತುಪ್ಪದಹಳ್ಳಿ ಎಂಬಲ್ಲಿ ಚೌಡಮ್ಮನ ದೇವಸ್ಥಾನ ಇರುವುದಿಲ್ಲ, ಚೌಡಮ್ಮನ ದೇವಸ್ಥಾನದಿಂದ ತಿಪ್ಪೇಶಪ್ಪ ಮನೆಯ ತನಕ ರಸ್ತೆ ಕಾಮಗಾರಿಯನ್ನು ಮಾಡಿರುವುದಿಲ್ಲವೆಂದು ಆಪಾದಿಸಿರುತ್ತಾರೆ. ಆದ್ದರಿಂದ ದೂರುದಾರರು ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿದ ಪ್ರಪತ್ರ-1 ಮತ್ತು 2 ರಡಿಯಲ್ಲಿ ಸಲ್ಲಿಸಿದ ದೂರು **ನಿಪಿ-1** ಮತ್ತು **ನಿಪಿ-2** ಎಂದು, ತುಪ್ಪದಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯ ಆಟದ ಮೈದಾನಕ್ಕೆ ಸಂಬಂಧಪಟ್ಟಂತೆ, ಮುಖ್ಯೋಪಾಧ್ಯಾಯರು ಕೊಟ್ಟಿರುವ

ಒಂದು ಮೂಲ ಪತ್ರ **ನಿಪಿ–3** ಎಂದು, ನಗದು ಪುಸ್ತಕದ 2 ಜೆರಾಕ್ಸ್ ಹಾಳೆಗಳಾದ **ನಿಪಿ–4 ಮತ್ತು ನಿಪಿ–5** ಹಾಜರ್ ಪಡಿಸಿರುವುದಾಗಿ ನುಡಿದಿರುತ್ತಾರೆ.

**17)** ದೂರುದಾರರು ತಮ್ಮ ಪಾಟೀ ಸವಾಲಿನಲ್ಲಿಯೂ ಸಹ ಮೇಲ್ಕಂಡ ಕಾಮಗಾರಿಗಳ ಪೈಕಿ 1) ಸುವರ್ಣ ಗ್ರಾಮಯೋಜನೆಯಡಿಯಲ್ಲಿ ಮತ್ತೊಂದು ನರೇಗಾ ಯೋಜನೆಯಡಿಯಲ್ಲಿ ಆಗಿರುವುದಾಗಿ ನುಡಿದಿರುತ್ತಾರೆ. ಪಾಟೀ ಸವಾಲಿನಲ್ಲಿ ಮುಂದುವರೆದು ಈ ಕೆಳಕಂಡಂತೆ ನುಡಿದಿರುತ್ತಾರೆ:–

**" ನಿಶಾನೆ ಪಿ–3 ನ್ನು ನಾನು ಪಡೆದ ನಂತರ ನಾನು ಪಂಚಾಯತಿಯಲ್ಲಿ ವಿಚಾರಿಸಿದಾಗ ಬಿಲ್ ಆಗಿದೆ ಆದರೆ, ಕೆಲಸ ಆಗಿಲ್ಲ ಎಂಬುದಾಗಿ ನನಗೆ ತಿಳಿಯಿತು."**

**" ದೋಷಾರೋಪಣೆಯಲ್ಲಿ ಮಾಡಿರುವ ಆಪಾದನೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಮತ್ತು ಯಾರದೋ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂಬುದು ಸರಿಯಲ್ಲ."**

ಈ ರೀತಿ ದೂರುದಾರರು ಸಾಕ್ಷ್ಯ ನುಡಿದಿರುವುದನ್ನು ಪರಿಶೀಲಿಸಿದಾಗ, ಅಂದಾಜು ಪಟ್ಟಿಯಲ್ಲಿ ತೋರಿಸಿದಂತೆ ಕಾಮಗಾರಿ ನಿರ್ವಹಿಸದೆ ಹಣ ಡ್ರಾ ಮಾಡಿದ್ದಾರೆಂಬುದು ಸ್ಪಷ್ಟವಾಗುತ್ತದೆ.

**18) ಪಿಡಬ್ಲ್ಯೂ–2** ಶ್ರೀ. **ಪ್ರಕಾಶ್ ಕೆ.ಟಿ,** ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಸದರಿ ದೂರಿನ ಕಡತವನ್ನು ತಾನು ತನಿಖೆ ಮಾಡಿರುವುದಾಗಿ, ದೂರಿನಲ್ಲಿ ನಮೂದಿಸಿರುವ ಆಪಾದನೆಗೆ ಸಂಬಂಧಿಸಿದಂತೆ, ದಿ: 03/12/2013 ರಂದು ದೂರುದಾರರ ಮತ್ತು ಆಸನೌರವರ ಸಮಕ್ಷಮದಲ್ಲಿ ಸ್ಥಳ ಪರಿಶೀಲನೆ ಮಾಡಿ

ಕಾಮಗಾರಿ ಕೈಗೊಂಡಿಲ್ಲದಿರುವುದನ್ನು ಗಮನಿಸಲಾಗಿದ್ದು, ಸ್ಥಳ ಪರಿಶೀಲನೆ ಸಮಯದಲ್ಲಿ ಕಂಡುಬಂದ ಅಂಶಗಳನ್ನು ನಿಪಿ–13 ರಲ್ಲಿ ನಮೂದು ಮಾಡಿರುವುದಾಗಿ ಹಾಗೂ ಸ್ಥಳ ತನಿಖೆ ಸಮಯದಲ್ಲಿ ಚಿತ್ರೀಕರಿಸಿದ ಚಿತ್ರಣ ಸಿಡಿಯನ್ನು ನಿಪಿ–14 ಎಂದು ಗುರುತಿಸಲಾಗಿರುತ್ತದೆ. ಮುಂದುವರೆದು ಈ ಕೆಳಕಂಡಂತೆ ನುಡಿದಿರುತ್ತಾರೆ:–

“ ಶ್ರೀ. ರಂಗನಾಥ ಸ್ವಾಮಿ ದೇವಸ್ಥಾನ ದಿಂದ ಪಿಡಬ್ಲ್ಯೂಡಿ ರಸ್ತೆಯವರೆಗೆ ಮೆಟಲಿಂಗ್ ಕಾಮಗಾರಿ ನಿರ್ವಹಿಸದೇ, ರೂ. **1,43,850/–** ಗಳನ್ನು ಪಾವತಿಸಿರುವುದು ತಿಳಿದುಬಂದಿರುತ್ತದೆ. ಸಾಮಾನ್ಯ ವರ್ಗದ ಶ್ರೀಮತಿ ಪುಷ್ಪಾ ಕೋಂ ವಿಜಯಕುಮಾರ್ ಇವರಿಗೆ ರಾಜೀವಗಾಂಧಿ ವಸತಿ ಯೋಜನೆಯಡಿಯಲ್ಲಿ ಎಸ್.ಟಿ ಮನೆಯನ್ನು ಹಂಚಿಕೆಮಾಡಿ ರೂ. **25,000/–** ಪಾವತಿಸಿರುವುದು ತಿಳಿದುಬಂದಿರುತ್ತದೆ. ರೂ. **1.50** ಲಕ್ಷ ಅಂದಾಜು ಮೊತ್ತದ ತುಪ್ಪದಹಳ್ಳಿ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆ ಅವರಣ ಸಮಗೊಳಿಸುವುದು, ಈ ಕಾಮಗಾರಿ ಬದಲಾಗಿ ಆರ್.ಡಿ. ಕಾವಲ್ ಗ್ರಾಮದ ಶಾಲಾ ಅವರಣ ಬಳಿ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ತಿಳಿದುಬಂದಿದೆ. ರೂ. **1.90** ಲಕ್ಷ ಅಂದಾಜು ಮೊತ್ತದ ತುಪ್ಪದಹಳ್ಳಿ ಗ್ರಾಮದ ತಿಪ್ಪೇಶಪ್ಪನ ಮನೆಯಿಂದ ಚೌಡಮ್ಮನ ಗುಡಿಯವರೆಗೆ ಬಾಕ್ಸ್ ಚರಂಡಿ ಕಾಮಗಾರಿ ಬದಲಾಗಿ ಆರ್.ಡಿ. ಕಾವಲ್ ಗ್ರಾಮದ ಈರಜ್ಜನ ತಿಪ್ಪೇಶಪ್ಪನ ಮನೆಯಿಂದ ಚೌಡಮ್ಮನ ಗುಡಿಯವರೆಗೆ, ಬಾಕ್ಸ್ ಚರಂಡಿ ಕಾಮಗಾರಿ ಕೈಗೊಂಡಿರುವುದು ತಿಳಿದುಬಂದಿದೆ. ಈ ಬದಲಾವಣೆಗಳಿಗೆ ಸೂಕ್ತ ಪ್ರಾದಿಕಾರದಿಂದ ಅನುಮೋದನೆ ಪಡೆದಿರುವುದು ಕಂಡುಬಂದಿರುವುದಿಲ್ಲ.” ಎಂಬುದಾಗಿ ನುಡಿದಿರುತ್ತಾರೆ.

19) ಶಿಸ್ತು ಪ್ರಾಧಿಕಾರವು ಮುಂದುವರೆದು ಮತ್ತೊಬ್ಬ ತನಿಖಾಧಿಕಾರಿ **ಶ್ರೀ ರುದ್ರಮೂರ್ತಿ/ಪಿಡಬ್ಲ್ಯೂ-3** ರವರ ಸಾಕ್ಷ್ಯ ನುಡಿಸಿಕೊಂಡಿದ್ದು, ತಮ್ಮ ಸಾಕ್ಷ್ಯದಲ್ಲಿ ಶ್ರೀ ರಂಗನಾಥ ಸ್ವಾಮಿ ದೇವಸ್ಥಾನದಿಂದ ಪಿ.ಡಬ್ಲ್ಯು.ಡಿ ರಸ್ತೆ ವರೆಗೆ ಮೆಟಲಿಂಗ್ ಕಾಮಗಾರಿ ನಡೆದಿರುವುದಾಗಿ ಮತ್ತು ಕಾಮಗಾರಿ ನಿರ್ವಹಿಸದೆ ರೂ.1,43,850/-ಗಳನ್ನು ಪಾವತಿಸಿರುವುದು ಕಂಡುಬಂದಿರುವುದಾಗಿ ನುಡಿದಿರುತ್ತಾರೆ ಹಾಗೂ ರಾಜೀವಗಾಂಧಿ ವಸತಿ ಯೋಜನೆಯಡಿ ಎಸ್.ಟಿ. ವರ್ಗಕ್ಕೆ ಸೇರಿದ ಮನೆಯನ್ನು ಸಾಮಾನ್ಯವರ್ಗದ ಶ್ರೀಮತಿ ಪುಷ್ಪ ಕೋಂ ವಿಜಯಕುಮಾರ್ ರವರಿಗೆ ಹಂಚಿಕೆ ಮಾಡಿ ರೂ. 25,000/- ಗಳನ್ನು ಪಾವತಿಸಿರುವುದು ತಿಳಿದುಬಂದಿರುತ್ತದೆಂದು ನುಡಿದಿರುತ್ತಾರೆ. ಆದರೆ, ಈ ಎರಡನೇ ಆರೋಪಕ್ಕೆ ಸಂಬಂಧಿಸಿದಂತೆ ಈಗಾಗಲೇ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಚಿತ್ರದುರ್ಗ ರವರು ಇಲಾಖಾ ವಿಚಾರಣೆ ನಡೆಸಿ ಶ್ರೀ ಜಿ.ಎನ್. ಕುಬೇಂದ್ರಪ್ಪ, ಪಿಡಿಓ, ತುಪ್ಪದಳ್ಳಿ ಗ್ರಾಮ ಪಂಚಾಯತಿ ರವರು ತಪ್ಪಿತಸ್ಥನೆಂದು ಕಂಡುಬಂದಿದ್ದರಿಂದ 1 ವಾರ್ಷಿಕ ಬಡ್ತಿಯನ್ನು ತಡೆಹಿಡಿಯುವ ದಂಡನೆ ವಿಧಿಸಿ ಆ ಪ್ರಕರಣ ಮುಕ್ತಾಯಗೊಳಿಸಿದ್ದಾಗಿ ನುಡಿದಿರುತ್ತಾರೆ.

20) ಈ ಸಾಕ್ಷಿದಾರರನ್ನು ಆ.ಸ.ನೌ ಪರ ವಕೀಲರು ಪಾಟೀ ಸವಾಲು ವಿಚಾರಣೆಗೆ ಒಳಪಡಿಸಿದ್ದು, ಪಾಟೀ ಸವಾಲಿನಲ್ಲಿ **" ಉದ್ಯೋಗಖಾತ್ರಿ ಯೋಜನೆಯಡಿಯಲ್ಲಿ ಕೈಗೊಂಡ ಶ್ರೀ ರಂಗನಾಥ ಸ್ವಾಮಿ ದೇವಸ್ಥಾನದಿಂದ ಪಿಡಬ್ಲ್ಯೂಡಿ ರಸ್ತೆಯವರೆಗೆ ಮಾಡಲಾದ ಮೆಟಲಿಂಗ್ ರಸ್ತೆ ಕಾಮಗಾರಿ ನಿರ್ವಹಿಸದೆ ಹಣ ಪಾವತಿಸಿರುವ ಬಗ್ಗೆ ಮಾತ್ರ ವರದಿ ನೀಡಿರುವುದಾಗಿ ಸ್ಪಷ್ಟವಾಗಿ ನುಡಿದಿರುತ್ತಾರೆ."**

21) ಶಿಸ್ತುಪ್ರಾಧಿಕಾರವು ಶ್ರೀ ಬಿ.ಆರ್. ಅನಿಲ್‌ಕುಮಾರ್, ಮುಖ್ಯ ಅಭಿಯಂತರರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ಪಿಡಬ್ಲ್ಯೂ–4 ಎಂದು ಸಾಕ್ಷ್ಯ ನುಡಿಸಿಕೊಂಡಿದ್ದು, ಇವರ ಮುಖ್ಯ ವಿಚಾರಣೆಯಲ್ಲಿ ಈ ಕೆಳಕಂಡಂತೆ ನುಡಿದಿರುತ್ತಾರೆ:–

**" ಈ ಹಿನ್ನೆಲೆಯಲ್ಲಿ ರಂಗನಾಥ ಸ್ವಾಮಿ ದೇವಸ್ಥಾನದಿಂದ, ಪಿ.ಡಬ್ಲ್ಯುಡಿ ರಸ್ತೆಯವರೆಗೆ ಮೆಟಲಿಂಗ್ ಕಾಮಗಾರಿ ಕೈಗೊಳ್ಳದೆ ಇದ್ದರೂ ಸಹ, ರೂ.1,43,850 ಗಳನ್ನು ತೆಗೆದಿರುವುದು ಹಾಗೂ ಯಾವುದೇ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ತುಪ್ಪದಹಳ್ಳಿ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆ ಆವರಣ ಸಮಗೊಳಿಸುವ ಕಾಮಗಾರಿಗೆ ಬದಲಾಗಿ, ಆರ್.ಡಿ .ಕಾವಲ್ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಂಭಾಗದಲ್ಲಿ ಬಾಕ್ಸ್ ಚರಂಡಿ ಮತ್ತು ಗ್ರಾವಲ್ ಗುಂಡಿ ಮುಚ್ಚುವ ಕೆಲಸವನ್ನು ಹಾಗೂ ತುಪ್ಪದಹಳ್ಳಿ ಗ್ರಾಮದ ತಿಪ್ಪೇಶಪ್ಪನ ಮನೆಯಿಂದ ಚೌಡಮ್ಮನ ಗುಡಿಯವರೆಗೆ ಬಾಕ್ಸ್ ಚರಂಡಿ ಕಾಮಗಾರಿಗೆ ಬದಲಾಗಿ, ಆರ್.ಡಿ.ಕಾವಲ್ ಗ್ರಾಮದಲ್ಲಿ, ಈರಜ್ಜನ ತಿಪ್ಪೇಶಪ್ಪನ ಮನೆಯಿಂದ ಚೌಡಮ್ಮನ ಗುಡಿಯವರೆಗೆ, ಬಾಕ್ಸ್ ಚರಂಡಿ ಕಾಮಗಾರಿ ನಿರ್ವಹಿಸಿ ಕರ್ತವ್ಯ ಲೋಪವೆಸಗಿರುವುದು ತಿಳಿದು ಬಂದಿರುತ್ತದೆ"** ಎಂದು ಸ್ಪಷ್ಟವಾಗಿ ಅಭಿಪ್ರಾಯ ನೀಡಿರುತ್ತಾರೆ.

ಈ ಸಾಕ್ಷಿದಾರರನ್ನು ಆ.ಸ.ನೌ ರವರು ಪಾಟೀ ಸವಾಲು ವಿಚಾರಣೆಗೆ ಒಳಪಡಿಸಿದ್ದು, ಪಾಟೀ ಸವಾಲಿನಲ್ಲಿ ಪಿಡಬ್ಲ್ಯೂ–3/ಶ್ರೀ ರುದ್ರಮೂರ್ತಿ ಸಲ್ಲಿಸಿದ ವರದಿಯಲ್ಲಿ ರಂಗನಾಥ ಸ್ವಾಮಿ ದೇವಸ್ಥಾನದಿಂದ ಪಿಡಬ್ಲ್ಯೂಡಿ ರಸ್ತೆಯವರೆಗೆ ಮೆಟಲಿಂಗ್ ಕಾಮಗಾರಿ ನಡೆದಿರುವುದಾಗಿ ಮತ್ತು ಕಾಮಗಾರಿ ಆಗಿದ್ದರಿಂದ ರು. 1,43,850/– ಗಳನ್ನು ಡ್ರಾ ಮಾಡಲಾಗಿದೆ ಎಂದು ಸೂಚಿಸಿದ್ದನ್ನು ನಿರಾಕರಿಸಿರುತ್ತಾರೆ. ಅಲ್ಲದೆ, ಗ್ರಾಮಪಂಚಾಯತಿಗೆ ಸಂಬಂಧಿಸಿದ ಕಾಮಗಾರಿಗಳನ್ನು ತಾಲ್ಲೂಕು ಪಂಚಾಯತಿಯ ಇಂಜಿನಿಯರ್ ರವರುಗಳು ಅನುಷ್ಠಾನಗೊಳಿಸುವುದು ವಾಡಿಕೆಯಾಗಿರುತ್ತದೆಂದು ನುಡಿದಿರುತ್ತಾರೆ. ಮುಂದುವರೆದು, ಕಾಮಗಾರಿಗಳು ಪೂರ್ಣಪ್ರಮಾಣದಲ್ಲಿ ಪರಿಶೀಲಿಸಿ ಅವುಗಳು ಸ್ಪೆಸಿಫಿಕೇಶನ್‌ಗಳಿಗೆ ಅನುಗುಣವಾಗಿ ಕಾಮಗಾರಿಯ ಸ್ಥಳದಲ್ಲಿ ಅನುಷ್ಠಾನಗೊಂಡಿದೆಯೇ ಎಂಬುದನ್ನು ಸಂಪೂರ್ಣವಾಗಿ ಖಾತರಿ ಮಾಡಿಕೊಳ್ಳಬೇಕಾದ ಹೊಣೆಗಾರಿಕೆ ಸಂಬಂಧಪಟ್ಟ ಇಂಜಿನಿಯರ್ ರವರ ಜವಬ್ದಾರಿಯಾಗಿರುತ್ತದೆಂದು ನುಡಿದಿರುತ್ತಾರೆ. ಅಲ್ಲದೆ, ಕಾಮಗಾರಿಗಳನ್ನು ಪೂರ್ಣಗೊಳಿಸಲು ಈ ಆ.ಸ.ನೌ ರವರಿಗೆ ಸಂಪೂರ್ಣ ಅಧಿಕಾರ ವ್ಯಾಪ್ತಿ ಇರುವುದಿಲ್ಲ ಎಂದು

ಸೂಚಿಸಿದ್ದನ್ನು ನಿರಾಕರಿಸಿರುತ್ತಾರೆ. ಸಹಾಯಕ ಇಂಜಿನಿಯರ್ ರವರ ಬೇಡಿಕೆಗೆ ಅನುಗುಣವಾಗಿ ಕಾಮಗಾರಿಗಳಿಗೆ ಹಣವನ್ನು ಬಿಡುಗಡೆ ಮಾಡಲಾಗುತ್ತದೆಂದು ನುಡಿದಿರುತ್ತಾರೆ. ಈ ಆ.ಸ.ನೌ ರವರು ಲೋಕಾಯುಕ್ತ ತನಿಖಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದಾಗ ಈ ರಸ್ತೆ ಪರಿವೀಕ್ಷಣ ಸಮಯದಲ್ಲಿ ಹಾಜರಿದ್ದು ಪಂಚನಾಮೆಗೆ ರುಜು ಮಾಡಿರುವುದು ದೃಡಪಡುತ್ತದೆ. ಈ ಆ.ಸ.ನೌ ರವರು ಈ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಜವಾಬ್ದಾರರಿದ್ದು ಕಾಮಗಾರಿಯಾಗುವ ಸಮಯದಲ್ಲಿ ತನ್ನ ಹೊಣೆಗಾರಿಕೆಯನ್ನು ಸರಿಯಾಗಿ ನಿಬಾಯಿಸದೆ ಕರ್ತವ್ಯಲೋಪ ಎಸಗಿರುತ್ತಾರೆಂಬುದು ರುಜುವಾತಾಗುತ್ತದೆ.

22) ಈ ಆ.ಸ.ನೌ ರವರು ಈ ವಿವಾದಿತ ಕಾಮಗಾರಿಗಳಲ್ಲಿ ಆಗಿರುವ ಪ್ರಮಾದಕ್ಕೆ ತಾನು ಕಾರಣಕರ್ತನಿರುವುದಿಲ್ಲ ಎಂಬುದನ್ನು ತೋರಿಸಲು ಯಾವುದೇ ಸಾಕ್ಷ್ಯವನ್ನು ನೀಡಿರುವುದಿಲ್ಲ. ತಾತ್ಪೂರ್ತಿಕವಾಗಿ ಶಿಸ್ತು ಪ್ರಾಧಿಕಾರ ನೀಡಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳು ಈ ಆ.ಸ.ನೌ ರವರ ವಿರುದ್ಧ ರಚಿಸಲಾದ ಆರೋಪಗಳನ್ನು ರುಜುವಾತುಪಡಿಸುವಲ್ಲಿ ಯಶಸ್ವಿಯಾಗಿರುತ್ತದೆ. ಈ ಆ.ಸ.ನೌ ರವರು ಈ ವಿವಾದಿತ ಕಾಮಗಾರಿಗಳನ್ನು ನಿಗದಿತ ಮತ್ತು ಅಂದಾಜುಪಟ್ಟಿಯಲ್ಲಿ ತೋರಿಸಿದ ಸ್ಥಳದಲ್ಲಿ ನಿರ್ವಹಿಸದೆ ಬೇರೆ ಸ್ಥಳದಲ್ಲಿ ನಿರ್ವಹಿಸಿದ್ದು, ಈ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದಿರುವುದಿಲ್ಲವೆಂಬುದು ರುಜುವಾತಾಗುತ್ತದೆ. ಈ ಆ.ಸ.ನೌ ರವರು ಈ ಕಾಮಗಾರಿಗಳಲ್ಲಿ ಯಾವುದೇ ಹಣದ ಅವ್ಯವಹಾರವಾಗಲೀ ಅಥವಾ ಸರ್ಕಾರಕ್ಕೆ ನಷ್ಟ ಉಂಟುಮಾಡಿರುವುದಿಲ್ಲ. ಆದರೆ, ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯದೆ ಅಂದಾಜುಪಟ್ಟಿಯಲ್ಲಿರುವಂತೆ ಕಾಮಗಾರಿಗಳನ್ನು ನಿರ್ವಹಿಸದೆ ಬೇರೆ ಕಡೆ ನಿರ್ವಹಿಸಿ ಕರ್ತವ್ಯಲೋಪವೆಸಗಿರುವುದನ್ನು ಶಿಸ್ತು ಪ್ರಾಧಿಕಾರವು ರುಜುವಾತುಪಡಿಸಿರುತ್ತದೆ.

23) ಈ ಎಲ್ಲಾ ಕಾರಣಗಳಿಂದ ಶಿಸ್ತು ಪ್ರಾಧಿಕಾರದವರು ಆ.ಸ.ನೌ ಶ್ರೀ. **ಕೃಷ್ಣಮೂರ್ತಿ,** ಅಂದಿನ ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ರವರ ವಿರುದ್ಧ ಹೊರಿಸಲಾದ ಆಪಾದನೆ ದುರ್ನಡತೆ ಮತ್ತು

ಕರ್ತವ್ಯಲೋಪಗಳನ್ನು ರುಜುವಾತುಪಡಿಸುವಲ್ಲಿ ಯಶಸ್ವಿಯಾಗಿರುತ್ತಾರೆಂದು ನಿರ್ಣಯಿಸಲಾಗಿದೆ. ಅಲ್ಲದೇ, ಶಿಸ್ತು ಪ್ರಾಧಿಕಾರದವರು ನೀಡಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳು ಆ.ಸ.ನೌ ರವರು ಕರ್ತವ್ಯಲೋಪ ಮತ್ತು ದುರ್ನಡತೆ ಎಸಗಿರುವ ಹೆಚ್ಚಿನ ಸಂಭವನೀಯತೆ (probabilities) ಕಂಡು ಬರುತ್ತದೆ. ಈ ಎಲ್ಲಾ ಕಾರಣಗಳಿಂದ ಅಂಶ 1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

**ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

**ಆದೇಶ**

ಶಿಸ್ತು ಪ್ರಾಧಿಕಾರದವರು ಆ.ಸ.ನೌ ಶ್ರೀ. **ಕೃಷ್ಣಮೂರ್ತಿ,** ಅಂದಿನ ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ರವರ ವಿರುದ್ಧದ ಆಪಾದನೆಯನ್ನು **ರುಜುವಾತುಪಡಿಸಿದೆ** ಎಂದು ನಿರ್ಣಯಿಸಲಾಗಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

(ಸಲ್ವಕುಮಾರ್.ಸಿ)<br>
ಅಪರ ನಿಬಂಧಕರು ವಿಚಾರಣೆಗಳು-16,<br>
ಕರ್ನಾಟಕ ಲೋಕಾಯುಕ್ತ,<br>
ಬೆಂಗಳೂರು.

# KARNATAKA LOKAYUKTA

No.UPLOK-2/DE/68/2017/ARE-16

Multi Storied Building,
Dr. B.R. Ambedkar Veedhi,
Bengaluru-560 001.
Dated 17.03.2021.

## RECOMMENDATION

Sub:- Departmental inquiry against Sri Krishnamurthy, the then Assistant Engineer, Panchayath Raj Engineering Sub-division, Holalkere - reg.

Ref:- 1) Government Order No.RDP 165 ENQ 2016 Dated 05.01.2017.

2) Nomination order No. UPLOK-2/ DE/68/2017 dated 17.01.2017 of Upalokayukta, State of Karnataka.

3) Inquiry report dated 06.03.2021 of Additional Registrar of Enquiries-16, Karnataka Lokayukta, Bengaluru.

~~~~~

The Government by its order dated 05.01.2017 initiated the disciplinary proceedings against Sri Krishnamurthy, the then Assistant Engineer, Panchayath Raj Engineering Sub-division, Holalkere, [hereinafter referred to as Delinquent Government Official, for short as 'DGO' ] and entrusted the departmental inquiry to this Institution.
~~~~~

2. This Institution by Nomination Order No. UPLOK-2/ DE/68/2017 dated 17.01.2017 nominated Additional Registrar of Enquiries-11, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him. Subsequently, by order No.Uplok-1&2/DE/Transfers/2019 dated 07.02.2019, the Additional Registrar of Enquiries-16, Karnataka Lokayukta, Bengaluru, was re-nominated as the Inquiry Officer to continue the said departmental inquiry against DGO.

3. The DGO Sri Krishnamurthy, the then Assistant Engineer, Panchayath Raj Engineering Sub-division, Holalkere, was tried for the following charges :-

> "ಮೊದಲನೆಯದಾಗಿ:- ಆಪಾದಿತ ಸರ್ಕಾರಿ ನೌಕರರಾದ ಕೃಷ್ಣಮೂರ್ತಿ ಆದ ನೀವು ಚಿತ್ರದುರ್ಗ ಜಿಲ್ಲೆಯ, ಹೊಳಲ್ಕೆರೆ ತಾಲ್ಲೂಕಿನ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದಲ್ಲಿ 2010-11ನೆಯ ಇಸವಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಚಿತ್ರದುರ್ಗ ಜಿಲ್ಲೆಯ ಹೊಳಲ್ಕರೆ ತಾಲ್ಲೂಕಿನ ತುಪ್ಪದಹಳ್ಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ರಾಜೀವ್ ಗಾಂಧಿ ಯೋಜನೆಯಡಿಯಲ್ಲಿನ ಕಾಮಗಾರಿಗಳಿಗೆ ಸಂಬಂದಪಟ್ಟಂತೆ ರೂ.1.50 ಲಕ್ಷ ಗಳಿಗೆ ಅಂದಾಜು ಪಟ್ಟಿಯನ್ನು 2010-11ನೆಯ ಸಾಲಿಗೆ ತುಪ್ಪದಹಳ್ಳಿ ಗ್ರಾಮ ಪಂಚಾಯಿತಿಯ ಪರವಾಗಿ ತುಪ್ಪದಹಳ್ಳಿ ಗ್ರಾಮದಲ್ಲಿ ಶಾಲೆಯ ಆಟದ ಮೈದಾನವನ್ನು ಸಮತಟ್ಟು ಮಾಡುವ ಬಗ್ಗೆ ತಯಾರಿಸಲಾಗಿದ್ದು ಅ ಕಾಮಗಾರಿಯನ್ನು ಮಾಡಿದಿದ್ದರೂ ಸಹ ಅ ಗ್ರಾಮ ಪಂಚಾಯಿತಿಯ ಅಂದಿನ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯಾದ ಕುಬೇರಪ್ಪ ಮತ್ತು ಅಂದಿನ ಅಧ್ಯಕ್ಷರಾಗಿದ್ದ ಟಿ.ಆರ್. ಶಂಕರಮೂರ್ತಿರವರೊಡನೆ ನೀವು ಶಾಮೀಲಾಗಿ ಮೇಲ್ಕಂಡ ಮೊತ್ತವು ವೆಚ್ಚವಾಗಿದೆ ಎಂಬುದಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಆ

ಮೂಲಕ ನೀವು ಕರ್ತವ್ಯಲೋಪನ್ನೆಸಗಿ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ii) ರಿಂದ (iii)ರಡಿಯಲ್ಲಿ ದುರ್ನಡತೆಯನ್ನೆಸಗಿದ್ದೀರಿ.

ಎರಡನೆಯದಾಗಿ:- ಆಪಾದಿತ ಸರ್ಕಾರಿ ನೌಕರರಾದ ಕೃಷ್ಣಮೂರ್ತಿ ಆದ ನೀವು ಚಿತ್ರದುರ್ಗ ಜಿಲ್ಲೆಯ, ಹೊಳಲ್ಕೆರೆ ತಾಲ್ಲೂಕಿನ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದಲ್ಲಿ 2010-11ನೆಯ ಇಸವಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಚಿತ್ರದುರ್ಗ ಜಿಲ್ಲೆಯ ಹೊಳಲ್ಕರೆ ತಾಲ್ಲೂಕಿನ ತುಪ್ಪದಹಳ್ಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ರಾಜೀವ್ ಗಾಂಧಿ ಯೋಜನೆಯಡಿಯಲ್ಲಿನ ಕಾಮಗಾರಿಗಳಿಗೆ ಸಂಬಂದಪಟ್ಟಂತೆ ತುಪ್ಪದಹಳ್ಳಿ ಗ್ರಾಮದ ತಿಪ್ಪೇಶಪ್ಪ ಎಂಬವರ ಮನೆಯಿಂದ ಚೌಡಮ್ಮ ದೇವಸ್ಥಾನದ ತನಕ ಚರಂಡಿ ಕಾಮಗಾರಿಗೆಂದು ರೂ.1.90 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು ಸದರಿ ಕಾಮಗಾರಿಯನ್ನು ನಡೆಸದೆ ಕಾಮಗಾರಿಯನ್ನು ನಡೆಸಲಾಗಿದೆ ಎಂಬುದಾಗಿ ಸುಳ್ಳು ದಾಖಲೆಗಳನ್ನು ಅಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿದ್ದ ಕುಬೇರಪ್ಪ ಮತ್ತು ಅಂದಿನ ಪಂಚಾಯಿತಿ ಅಧ್ಯಕ್ಷರಾಗಿದ್ದ ಕೆ.ಆರ್.ಶಂಕರಮೂರ್ತಿ ರವರೊಡನೆ ಶಾಮೀಲಾಗಿ ಸೃಷ್ಟಿ ಮಾಡಿ ಆ ಮೂಲಕ ನೀವು ಕರ್ತವ್ಯಲೋಪನ್ನೆಸಗಿ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ii) ರಿಂದ (iii)ರಡಿಯಲ್ಲಿ ದುರ್ನಡತೆಯನ್ನೆಸಗಿದ್ದೀರಿ.

ಮೂರನೆಯದಾಗಿ:- ಆಪಾದಿತ ಸರ್ಕಾರಿ ನೌಕರರಾದ ಕೃಷ್ಣಮೂರ್ತಿ ಆದ ನೀವು ಚಿತ್ರದುರ್ಗ ಜಿಲ್ಲೆಯ, ಹೊಳಲ್ಕೆರೆ ತಾಲ್ಲೂಕಿನ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದಲ್ಲಿ 2010-11ನೆಯ ಇಸವಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಚಿತ್ರದುರ್ಗ ಜಿಲ್ಲೆಯ ಹೊಳಲ್ಕರೆ ತಾಲ್ಲೂಕಿನ ತುಪ್ಪದಹಳ್ಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಆರ್.ಡಿ. ಕಾವಲು ಗ್ರಾಮದಲ್ಲಿ ಯಾವುದೇ ಅಧಿಕೃತವಾದ ಆದೇಶವಿಲ್ಲದೆ ಅನವಶ್ಯಕವಾದ ಕಾಮಗಾರಿಯನ್ನು ನಡೆಸಲಾಗಿದೆ ಎಂಬುದಾಗಿ ಅಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿದ್ದ ಕುಬೇರಪ್ಪ ಮತ್ತು ಅಂದಿನ ಪಂಚಾಯಿತಿ ಅಧ್ಯಕ್ಷರಾಗಿದ್ದ ಕೆ.ಆರ್.ಶಂಕರಮೂರ್ತಿ ರವರೊಡನೆ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಆ ಮೂಲಕ ನೀವು ಕರ್ತವ್ಯಲೋಪನ್ನೆಸಗಿ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ii) ರಿಂದ (iii)ರಡಿಯಲ್ಲಿ ದುರ್ನಡತೆಯನ್ನೆಸಗಿದ್ದೀರಿ.

ನಾಲ್ಕನೆಯದಾಗಿ:- ಆಪಾದಿತ ಸರ್ಕಾರಿ ನೌಕರರಾದ ಕೃಷ್ಣಮೂರ್ತಿ ಆದ ನೀವು ಚಿತ್ರದುರ್ಗ ಜಿಲ್ಲೆಯ, ಹೊಳಲ್ಕೆರೆ ತಾಲ್ಲೂಕಿನ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದಲ್ಲಿ 2010-11ನೆಯ ಇಸವಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಚಿತ್ರದುರ್ಗ ಜಿಲ್ಲೆಯ ಹೊಳಲ್ಕರೆ ತಾಲ್ಲೂಕಿನ ತುಪ್ಪದಹಳ್ಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಯಾವುದೇ ಅಧಿಕೃತ ಆದೇಶವಿಲ್ಲದೆ ತುಪ್ಪದಹಳ್ಳಿ ಗ್ರಾಮದಲ್ಲಿ ನಡೆಸಬೇಕಾಗಿದ್ದ ಕಾಮಗಾರಿಗಳನ್ನು ಆರ್.ಡಿ. ಕಾವಲು ಗ್ರಾಮದಲ್ಲಿ ನಡೆಸಿ ಸರ್ಕಾರಕ್ಕೆ ನಿಷ್ಫಲವಾದ ತಲಾ ರೂ.1.50 ಲಕ್ಷ ಮತ್ತು ರೂ.1.90 ಲಕ್ಷಗಳ ಆರ್ಥಿಕ ನಷ್ಟವನ್ನುಂಟು ಮಾಡಿ ಆ ಮೂಲಕ ನೀವು ಕರ್ತವ್ಯಲೋಪನ್ನೆಸಗಿ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3 (1) (ii) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿದ್ದೀರಿ."

4. The Inquiry Officer (Additional Registrar of Enquiries-16) on proper appreciation of oral and documentary evidence has held that, the above charge against the DGO Sri Krishnamurthy, the then Assistant Engineer, Panchayath Raj Engineering Sub-division, Holalkere, is ' proved'.

5. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer.

6. As per the First Oral Statement of the DGO recorded by the Enquiry Officer, DGO Sri Krishnamurthy, is due to retire from service on 28-02-2029.

7. Having regard to the nature of charge '*proved*' against the DGO and considering the totality of circumstances, it is hereby recommended to the Government to impose penalty of 'withholding one annual increment payable to DGO Sri Krishnamurthy, with cumulative effect.'

8. Action taken in the matter shall be intimated to this Authority.

Connected records are enclosed herewith.

17/3

**(JUSTICE B.S.PATIL)**
**Upalokayukta,**
**State of Karnataka.**

*BS**